

# ಒಂದು ಮನವಿ

ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಬೇಲೂರಿನಲ್ಲಿರುವ ರಾಮಕೃಷ್ಣ ಮಠದ ಶಾಖಾಕೇಂದ್ರವಾಗಿರುವ **ರಾಮಕೃಷ್ಣ ಮಠ, ಯೋಗೋದ್ಯಾನವು** ಹೊಸದಾಗಿ ಮೂರು ಮಹಡಿಗಳ ಉಚಿತ ಚಿಕಿತ್ಸಾಲಯ ಮತ್ತು ತಪಾಸಣೆಯ ಕೇಂದ್ರವೊಂದನ್ನು ನಿರ್ಮಿಸಲು ಹೊರಟಿದ್ದು, ಅದಕ್ಕಾಗಿ ನಿಮ್ಮ ಉದಾರ ಧನಸಹಾಯವನ್ನು ಕೋರುತ್ತೇವೆ. ಸುತ್ತುಮುತ್ತಲ ಕೊಳಗೇರಿಗಳಲ್ಲಿ ವಾಸಿಸುತ್ತಿರುವ, ಹಾಗೂ ಇನ್ನಿತರ ಬಡವರ್ಗದ ಜನರಿಗೆ ವೈದ್ಯಕೀಯ ಸೇವಾ ಸೌಕರ್ಯಗಳನ್ನು ಒದಗಿಸಿಕೊಡುವುದೇ ಈ ಕೇಂದ್ರದ ಉದ್ದೇಶವಾಗಿದೆ. ಈ ಹೊಸ ಕಟ್ಟಡದಲ್ಲಿ ಅಲೋಪಥಿ, ಹೋಮಿಯೋಪಥಿ, ಆಯುಸ್, ಪ್ಯಾಥೋಲಜಿ, ರೇಡಿಯೋಲಜಿ ಹಾಗೂ ಇನ್ನಿತರ ಪರೀಕ್ಷೆಗಳು ಹಾಗೂ ವಿವಿಧ ವೈದ್ಯಕೀಯ ಸೇವೆಗಳಿಗಾಗಿ ಅಗತ್ಯವಿರುವ ವಿಶಾಲ ಸ್ಥಳಾವಕಾಶವನ್ನು (24,642 ಚದರ ಅಡಿ) ಬಳಸಲಾಗುವುದು. ಇದರ ನಿರ್ಮಾಣಕ್ಕೆ ಸುಮಾರು 4 ಕೋಟಿ ರೂ. ವೆಚ್ಚ ತಗಲುವುದಾಗಿ ಅಂದಾಜು ಮಾಡಲಾಗಿದೆ. ದಿನೇದಿನೇ ರೋಗಿಗಳ ಸಂಖ್ಯೆ ವೃದ್ಧಿಹೊಂದುತ್ತಿರುವ ಕಾರಣ ಈಗ ಬಳಸಲಾಗುತ್ತಿರುವ ಕಟ್ಟಡದಲ್ಲಿ ವೈದ್ಯಕೀಯ ಸೇವೆ ನಡೆಸುವುದು ಅತ್ಯಂತ ಕಷ್ಟವಾಗುತ್ತಿದೆ. ಈ ಕೊರತೆಯನ್ನು ತುಂಬಲು ಹೊಸ ಕಟ್ಟಡವನ್ನು ನಿರ್ಮಿಸುವುದು ಅನಿವಾರ್ಯವಾಗಿದೆ.



*''ಯಾರು ಇತರರಿಗೋಸ್ಕರ ಬದುಕುವರೋ, ಅವರೇ ನಿಜವಾಗಿ ಬದುಕುವವರು. ಉಳಿದವರು ಬದುಕಿದ್ದರೂ ಸತ್ತಂತೆ''* ಎಂಬ ಸ್ವಾಮಿ ವಿವೇಕಾನಂದರ ಮಾತಿನಿಂದ ಪ್ರೇರಣೆ ಪಡೆದ ಅನೇಕ ಮಂದಿ ವೈದ್ಯರು, ಶಸ್ತ್ರಚಿಕಿತ್ಸಾ ಪರಿಣತರು, ವಿವಿಧ ಕ್ಷೇತ್ರಗಳಲ್ಲಿ ನುರಿತ ವೈದ್ಯಕೀಯ ತಜ್ಞರು ಬಡಜನರಿಗೆ ಸೇವೆ ಸಲ್ಲಿಸಲು ಸ್ವ-ಇಚ್ಛೆಯಿಂದ ಮುಂದೆ ಬಂದಿರುತ್ತಾರೆ. 2014ರ ಡಿಸೆಂಬರ್ 4 ರಂದು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಈ ಕಟ್ಟಡದ ಶಿಲಾನ್ಯಾಸ ನೆರವೇರಿಸಿದರು. 2015ರ ಮಾರ್ಚ್ 28 ರಂದು ಕಟ್ಟಡದ ನಿರ್ಮಾಣಕಾರ್ಯ ಆರಂಭಗೊಂಡಿತು; ಒಂದೂವರೆ ವರ್ಷದ ಅವಧಿಯಲ್ಲಿ ಅದನ್ನು ಪೂರ್ಣಗೊಳಿಸುವ ಗುರಿಯನ್ನು ನಾವು ಹೊಂದಿದ್ದೇವೆ. ಅಡಿಪಾಯದ ಕೆಲಸಗಳು ಬಹುತೇಕ ಮುಗಿದಿದ್ದು, ಸದ್ಯದಲ್ಲೇ ಕಟ್ಟಡದ ಮೇಲ್ಭಾಗದ ನಿರ್ಮಾಣ ಆರಂಭವಾಗಲಿದೆ.

ಈ ಹಂತದಲ್ಲಿ ಆರ್ಥಿಕ ಕೊರತೆ ಒದಗಿರುವ ಕಾರಣ ಬಡವರ ಹಾಗೂ ವೈದ್ಯಕೀಯ ಸೇವೆಯ ತುರ್ತು ಅಗತ್ಯವಿರುವ ಜನರ ಸೇವಾಕಾರ್ಯಕ್ಕಾಗಿ ತಾವು ಉದಾರ ಧನಸಹಾಯ ನೀಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇವೆ. ನೀವು ನೀಡುವ ಸಹಕಾರವು, ದೀನದಲಿತರಿಗಾಗಿ ತಮ್ಮೆದೆಯ ರಕ್ತವನ್ನೇ ಬಸಿದ ಸ್ವಾಮಿ ವಿವೇಕಾನಂದರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿಯಾಗುವುದರಲ್ಲಿ ಸಂದೇಹವಿಲ್ಲ.

**ರಾಮಕೃಷ್ಣ ಮಠ, ಯೋಗೋದ್ಯಾನ** – ಈ ಸಂಸ್ಥೆಗೆ ದೇಣಿಗೆ, ಧನಸಹಾಯ ನೀಡುವವರಿಗೆ 1961ರ ಆದಾಯ ತೆರಿಗೆ ಕಾನೂನಿನ 80 G ಕಾಯಿದೆಯನ್ವಯ ಆದಾಯ ತೆರಿಗೆ ವಿನಾಯಿತಿ ಲಭಿಸುವುದು. ಚೆಕ್, ಡಿ.ಡಿ., ಮನಿ ಆರ್ಡರ್‌ಗಳನ್ನು Ramakrishna Math (Yogodyan) ಈ ಹೆಸರಿನಲ್ಲಿ ತೆಗೆದು ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ. ಆನ್‌ಲೈನ್ ಮೂಲಕ ದೇಣಿಗೆ ನೀಡುವವರು ಈ ಖಾತೆಗೆ ಕಳುಹಿಸಿ *(ಭಾರತದಲ್ಲಿ):* A/c No. 962042050, IFSC Code No.IDIB000M057, Indian Bank, Manicktolla Branch, (Branch Code No.676) *(ವಿದೇಶೀ ದೇಣಿಗೆಗಳಿಗೆ):* A/c No.6030092277, IFSC Code No. IDIB000M057, Indian Bank, Manicktolla Branch, (Branch Code No.676). ಆನ್‌ಲೈನ್ ವರ್ಗಾವಣೆ ಮಾಡಿದ ಕೂಡಲೇ ಇ-ಮೇಲ್ ಮೂಲಕ ತಮ್ಮ ಹೆಸರು, ಪೂರ್ಣ ಅಂಚೆ ವಿಳಾಸ, ಪ್ಯಾನ್ ನಂ., ನೀಡಲಾದ ಮೊತ್ತ ಇವನ್ನು ಈ ವಿಳಾಸಕ್ಕೆ ಕಳುಹಿಸಿ: rkmyogodyan@gmail.com ಅಥವಾ ಪ್ರತ್ಯೇಕವಾಗಿ ಅಂಚೆ ಮೂಲಕ ಕಳುಹಿಸಿಕೊಡಬೇಕಾಗಿ ವಿನಂತಿ.

ಭಗವತ್ಸೇವೆಯಲ್ಲಿ ತಮ್ಮ,
**ಸ್ವಾಮಿ ನಿತ್ಯಮುಕ್ತಾನಂದ,** ಅಧ್ಯಕ್ಷರು

**ಸಂಪರ್ಕಿಸಿ:**
**Ramakrishna Math (Yogodyan)**
7, Yogodyan Lane, Kankurgachhi, Kolkata 700054, India
Mob. 09433005588, 09433729024 Ph.(033) 2320-2927/9721/6000
Email: rkmyogodyan@gmail.com/Website:www.yogodyan.org